

ಎಲ್ಲಿಯ ಬ್ರೆಜಿಲ್, ಎಲ್ಲಿಯ ಕೋಲ್ಕತ್ತ!
ಆಹಾ, ಫುಟ್‌ಬಾಲ್ ಮಹಿಮೆಯೇ...

# ಇದು ಕಾಲ್ಚೆಂಡು ಜ್ವರದ ಸಮಯ

‘ಈ ಭೂಮಿ ಬಣ್ಣದ ಬುಗುರಿ’ ಎನ್ನುವ ‘ಮಹಾಕ್ಷತ್ರಿಯ’ ಸಿನಿಮಾದಲ್ಲಿನ ಹಂಸಲೇಖಾ ಅವರ ರಚನೆಯ ಗೀತೆಯನ್ನೀಗ, ‘ಈ ಭೂಮಿ ಬಣ್ಣದ ಚೆಂಡು’ ಎಂದು ಹಾಡಬಹುದೇನೊ? ಆ ಮಟ್ಟಿಗೆ ಫುಟ್‌ಬಾಲ್ ಜ್ವರ ಜಗತ್ತನ್ನು ಆವರಿಸಿಕೊಂಡಿದೆ.

2022ರ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಆಯೋಜನೆಗಾಗಿ ಕತಾರ್ ತನ್ನನ್ನು ತಾನು ಸಿಂಗರಿಸಿಕೊಂಡಿದೆ. ಒಲಿಂಪಿಕ್ಸ್ ಬಿಟ್ಟರೆ, ವಿಶ್ವದ ಬೃಹತ್ ಕ್ರೀಡಾಕೂಟ ಎನ್ನಬಹುದಾದ ‘ವಿಶ್ವಕಪ್ ಫುಟ್‌ಬಾಲ್’ ಪಂದ್ಯಾವಳಿಯ ಆಯೋಜನೆ ಯಾವುದೇ ದೇಶಕ್ಕೂ ಸವಾಲೆನ್ನಿಸುವ ಕೆಲಸ. ಭಾರತದಂಥ ಬೃಹತ್ ದೇಶಕ್ಕೇ ಈವರೆಗೆ ವಿಶ್ವಕಪ್ ಫುಟ್‌ಬಾಲ್ ಆಯೋಜನೆಯ ಆತಿಥ್ಯ ವಹಿಸಲು ಸಾಧ್ಯವಾಗಿಲ್ಲ. ಆದರೆ, ಕತಾರ್‌ನಂಥ ಪುಟ್ಟ ದೇಶ ತನ್ನ ಪ್ರತಿಷ್ಠೆಯನ್ನು ಪಣಕ್ಕಿಟ್ಟು ಕಾಲ್ಚೆಂಡಿನ ಕುಂಭಮೇಳವನ್ನು ಆಯೋಜಿಸುವ ಸವಾಲಿಗೆ ತನ್ನನ್ನೊಡ್ಡಿಕೊಂಡಿದೆ, ಸೈ ಅನ್ನಿಸಿಕೊಂಡಿದೆ.

ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಅವಧಿಯಲ್ಲಿ ಆತಿಥೇಯ ದೇಶ ಹಲವು ಕಾರಣಗಳಿಗಾಗಿ ಸುದ್ದಿಯಲ್ಲಿರುತ್ತದೆ. ವಿಶ್ವದ ಮೂಲೆಮೂಲೆಗಳ ಕ್ರೀಡಾರಸಿಕರು ಪಂದ್ಯಾವಳಿ ನಡೆಯುವ ದೇಶದಲ್ಲಿ ನೆರೆಯುತ್ತಾರೆ. ಇದರಿಂದಾಗಿ ಆ ದೇಶದ ಪ್ರವಾಸೋದ್ಯಮದಲ್ಲಿ ನವೋಲ್ಲಾಸ ಮೂಡುತ್ತದೆ. ಆಟದ ಹೊರತಾಗಿ, ಮೋಜಿನ ಕಾರಣದಿಂದಲೂ ಈ ಪಂದ್ಯಾವಳಿ ಸ್ಥಳ–ಸಮಯ ಸುದ್ದಿಯಲ್ಲಿರುತ್ತದೆ. ದೇಹಸುಖದ ಬಹುದೊಡ್ಡ ವ್ಯಾಪಾರ ಆಟದ ಅವಧಿಯಲ್ಲಿ ಚಾಲ್ತಿಯಲ್ಲಿರುತ್ತದೆ.

## ■ ಮಹತಿ

ವಿಶ್ವಕಪ್ ಫುಟ್‌ಬಾಲ್ ಆಯೋಜನೆಗೆ ವಿಷಾದದ ಮುಖವೂ ಇದೆ. ಕತಾರ್‌ನ ಉದಾಹರಣೆಯನ್ನೇ ನೋಡಿ. ಪ್ರಸಕ್ತ ಪಂದ್ಯಾವಳಿಗಾಗಿ ನಿರ್ಮಾಣಗೊಂಡ ಅತ್ಯಾಧುನಿಕ ಕ್ರೀಡಾಂಗಣಗಳು ಹಾಗೂ ಇತರ ನಿರ್ಮಾಣ ಕಾಮಗಾರಿಗಳಲ್ಲಿ ಸುಮಾರು 400–500 ವಲಸೆ ಕಾರ್ಮಿಕರು ಜೀವ ಕಳೆದುಕೊಂಡಿದ್ದಾರೆ ಎಂದು ಸಂಘಟನಾ ಸಮಿತಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ಜೀವ ಬಲು ಅಗ್ಗ’ ಎನ್ನಿಸುವುದು ಇಂಥ ಸಂದರ್ಭಗಳಲ್ಲೇ. ಅನ್ನ ಹುಡುಕಿಕೊಂಡು ದೇಶ ಬಿಟ್ಟುಬಂದ ಕಾರ್ಮಿಕರು, ಮತ್ತೊಂದು ದೇಶದಲ್ಲಿ ಆಕಸ್ಮಿಕವಾಗಿ ಜೀವ ಕಳೆದುಕೊಳ್ಳುವ ದುರಂತದ ತಳಹದಿಯಲ್ಲಿ ಆಟದ ಸಂಭ್ರಮ ರೂಪುಗೊಳ್ಳುವುದನ್ನು ಕಲ್ಪಿಸಿಕೊಳ್ಳುವುದೇ ಅಸಹನೀಯ. ಪಂದ್ಯಾವಳಿಯಲ್ಲಿ ಬಳಕೆಯಾಗುವ ಚೆಂಡುಗಳನ್ನು ರೂಪಿಸುವ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ಬಳಕೆಯಾಗುವುದು ದುರಂತದ ಮತ್ತೊಂದು ಮುಖ. ವಿಶ್ವಕಪ್ ಫುಟ್‌ಬಾಲ್ ಮಾತ್ರವಲ್ಲ, ವ್ಯಾಪಾರದ ಸ್ವರೂಪ ಪಡೆದ ಯಾವುದೇ ಸಂಭ್ರಮವನ್ನು ಕೆದಕಿನೋಡಿ, ಅಲ್ಲಿ ಸಾವುನೋವಿನ ಕಥನಗಳು ಪಿಸುಗುಡುತ್ತಿರುತ್ತವೆ, ಪಟಾಕಿಗಳಂತೆ.

ಸಂಕಟ–ಅಸಮಾಧಾನದ ನಡುವೆಯೂ ಕತಾರ್‌ನಲ್ಲಿ ನಡೆಯುತ್ತಿರುವ ಕಾಲ್ಚೆಂಡಿನ ಹಬ್ಬ ವಿಶ್ವದ ಗಮನಸೆಳೆದಿದೆ. ಅರ್ಜೆಂಟೀನಾ ತಂಡದ ಸೋಲುಗೆಲುವಿಗೆ ಕೇರಳದ ಪುಟ್ಟ ಬಾಲಕ ಪ್ರತಿಕ್ರಿಯಿಸುತ್ತಾನೆ. ಆಟದ ರೋಚಕತೆ ಮತ್ತು ಘನತೆಯ ಎದುರು ದೇಶ–ಧರ್ಮಗಳು ಹಿನ್ನೆಲೆಗೆ ಸರಿಯುತ್ತವೆ. ಈ ಟಿಪ್ಪಣಿಯೊಂದಿಗಿನ ಛಾಯಾಚಿತ್ರ ಗಮನಿಸಿ. ಕೋಲ್ಕತ್ತದ ಮನೆಯೊಂದರ ಮೇಲೆ ಬ್ರೆಜಿಲ್ ತಂಡವನ್ನು ಬೆಂಬಲಿಸುವ ಮ್ಯೂರಲ್ ಕಲಾಕೃತಿ ಮೂಡಿದೆ. ಈ ಕಲಾಕೃತಿಯನ್ನು ಮಧ್ಯಮ ವಯಸ್ಸಿನ ಹೆಣ್ಣುಮಗಳು ಬಾಗಿಲಲ್ಲಿ ನಿಂತು ನೋಡುತ್ತಿದ್ದಾರೆ. ಬಹುಶಃ, ಆ ಹೆಣ್ಣುಮಗಳು ತನ್ನ ಜೀವನದಲ್ಲೆಂದೂ ಕ್ರೀಡಾಂಗಣದಲ್ಲಿ ಕುಳಿತು ಫುಟ್‌ಬಾಲ್ ಪಂದ್ಯವನ್ನು ನೋಡಿರಲಿಕ್ಕಿಲ್ಲ; ಕಾಲ್ಚೆಂಡನ್ನು ಕಾಲಿನಿಂದ ಒದ್ದಿರುವ ಸಾಧ್ಯತೆಯೂ ಕಡಿಮೆ. ಎಲ್ಲಿಯ ಬ್ರೆಜಿಲ್, ಎಲ್ಲಿಯ ಕೋಲ್ಕತ್ತ! ಆಹಾ, ಫುಟ್‌ಬಾಲ್ ಮಹಿಮೆಯೇ...

ಪ್ರತಿಕ್ರಿಯಿಸಿ: feedback@sudha.co.in